( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ 27/08/2018

**ಅಸಲು ದಾವೆ.ನಂ. 281/2017**

( ಮುಖ್ಯ ವಿಚಾರಣೆಃ ಶ್ರೀ ಎಂ.ವೈ.ಪಿ. ವಕೀಲರಿಂದ )

**ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ, ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ**

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ರಿಂದ 3 ನೇ ಪ್ರತಿವಾದಿಗಳು ನನಗೆ ಬರೆದುಕೊಟ್ಟ ನೊಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 1 ನೇ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತನ್ನು ಗುರುತಿಸುತ್ತಾರೆ. ಮತ್ತು 2 ಮತ್ತು 3 ನೇ ಪ್ರತಿವಾದಿಯ ಸಹಿಗಳನ್ನು ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸರ್ವೆ ನಂಃ87/3 ಪಿ4 ರ ಎರಡು ಗಣಕೀಕೃತ ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು. ಸರ್ವೆ ನಂಃ87/3 ಪಿ4 ರ ಜಮೀನು ಸರ್ವೆ ನಂಃ87/4 ಕ್ಕೆ ಬದಲಾದ ನಂತರದ ಎರಡು ಗಣಕೀಕೃತ ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಸರ್ವೆ ನಂಃ87/4 ರ ಜಮೀನು ಸರ್ವೆ ನಂಃ87/4 ಮತ್ತು 87/6 ಎಂದು ಬದಲಾದ ಬಗ್ಗೆ ಎರಡು ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗನ್ನು ಕ್ರಮವಾಗಿ ನಿಪಿ6 ಮತ್ತು ನಿಪಿ-7 ಎಂದು ಗುರುತಿಸಲಾಯಿತು. ಎಂ.ಆರ್. ನಂಃಟಿ.43/2014-15 ರ ಮುಟೇಷನ್ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ವಕೀಲರ ಮೂಲಕ ಕಳುಹಿಸಿಕೊಟ್ಟ ನೋಟೀಸ್ ನ ಕಚೇರಿ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-9 ಎಂದು ಗುರುತಿಸಲಾಯಿತು. 4 ಅಂಚೆ ರಶೀದಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ10 ರಿಂದ ನಿಪಿ-13 ಎಂದು

ಗುರುತಿಸಲಾಯಿತು. 4 ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-14 ರಿಂದ ನಿಪಿ-17 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಲಾಯಿತು.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**(ಶ್ರೀಮತಿ. ಸರೋಜ.ಎಮ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**